## 12

# ದೇವರ ಪರಿಶುದ್ಧ ಯಾಜಕತ್ವ

*"... ನಮ್ಮನ್ನು ಪ್ರೀತಿಸುವವನೂ ತನ್ನ ರಕ್ತದ ಮೂಲಕ ನಮ್ಮನ್ನು ಪಾಪಗಳಿಂದ ಬಿಡಿಸಿದವನೂ ನಮ್ಮನ್ನು ರಾಜ್ಯವನ್ನಾಗಿಯೂ ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ ಮಾಡಿದವನೂ ಆಗಿರುವಾತನಿಗೆ ಯುಗಯುಗಾಂತರಗಳಲ್ಲಿಯೂ ಘನ ಮಹತ್ವಗಳಿರಲಿ. ಆಮೆನ್" (ಪ್ರಕಟನೆ 1:5, 6).*

ಪ್ರೌಢ ಮನುಷ್ಯನಂತೆ ಮತ್ತು ಅಮೇರಿಕನ್ ನಾಗರಿಕನಂತೆ, ನಾನು ಎರಡು ರೀತಿಯ ಕಾನೂನುಗಳ ಅಡಿಯಲ್ಲಿ ಜೀವಿಸಿದ್ದೇನೆ. ಮಗುವಿನಂತೆ, ಅಲ್ಪ ವಯಸ್ಕರಿಗಾಗಿ ನಮ್ಮ ದೇಶದಲ್ಲಿರುವ ನಿಯಮಗಳ ಅಡಿಯಲ್ಲಿ ಜೀವಿಸಿದ್ದೇನೆ. ಆ ಸಮಯದಲ್ಲಿ, ನನಗೆ ಕಾರ್ ನಡಿಸಲಿಕ್ಕೆ, ಮನೆಯನ್ನು ಕೊಂಡುಕೊಳ್ಳಲಿಕ್ಕೆ, ನನ್ನ ಸ್ವಂತ ಬ್ಯಾಂಕ್ ಅಕೌಂಟ್ ಹೊಂದಿರುವದಕ್ಕೆ ಇಲ್ಲವೇ ಮತ ಚಲಾಯಿಸಲಿಕ್ಕೆ ನನಗೆ ಹಕ್ಕು ಇರಲಿಲ್ಲ. ನನ್ನ ತಂದೆ ತಾಯಿಗಳ ಮೇಲ್ವಿಚಾರಣೆಯಲ್ಲಿ ನಾನು ಜೀವಿಸಬೇಕಾಗಿತ್ತು. ಯಾವ ದಾಖಲೆಯ ಮೇಲಾದರೂ ನಾನು ರುಜು ಹಾಕಿದರೆ ಅದಕ್ಕೆ ಒಪ್ಪಿಕೊಂಡು ನನ್ನ ತಂದೆತಾಯಿಗಳಲ್ಲಿ ಒಬ್ಬರು ರುಜು ಹಾಕಿದರೆ ಅದಕ್ಕೆ ಅರ್ಥ ಬರುತ್ತಿತ್ತು. ನಾನು ಮಗುವಿನಂತೆ ತಿಳಿಯಲ್ಪಡುತ್ತಿದ್ದೆನು, ಮತ್ತು ವಿಶೇಷವಾದ ಕಾನೂನುಗಳು ನನ್ನ ಜೀವಿತಕ್ಕೆ ಅನ್ವಯಿಸಲ್ಪಟ್ಟು ನನ್ನನ್ನು ರಕ್ಷಿಸುತ್ತಿದ್ದವು.

ಈಗ, ಒಬ್ಬ ಪ್ರೌಢನಂತೆ, ಇನ್ನೊಂದು ಕಾನೂನುಗಳ ಸರಣಿಯು ಅಧೀನತೆಯಲ್ಲಿ ಜೀವಿಸುತ್ತೇನೆ. ಈ ನಿಯಮಗಳ ಮಿತಿಗಳಲ್ಲಿ, ನಾನು ಕಾರನ್ನು ಹೊಂದಿಕೊಂಡು ಅದನ್ನು ನಡಿಸಬಹುದು, ಸ್ವಂತ ಮನೆಯನ್ನು ಹೊಂದಿಕೊಳ್ಳಬಹುದು, ವೈಯಕ್ತಿಕ ಬ್ಯಾಂಕ್ ಅಕೌಂಟ್ ಹೊಂದಿಕೊಂಡಿರಬಹುದು ಮತ್ತು ಬಹಿರಂಗ ಹುದ್ದೆಗಳಿಗಾಗಿ, ಮತ ಚಲಾಯಿಸಬಹುದು. ಈ ಕಾನೂನುಗಳ ಸಂಗ್ರಹದ ಕೆಳಗೆ ನಾನು ಹೆಚ್ಚಾಗಿ ಒಬ್ಬ ವ್ಯಕ್ತಿಯಾಗಿದ್ದೇನೆ, ಆದರೆ ಈ ವೈಯಕ್ತಿಕ ಹಕ್ಕುಗಳೊಂದಿಗೆ ವೈಯಕ್ತಿಕ ಜವಾಬ್ದಾರಿಕೆಗೆಳು ಬರುತ್ತವೆ. ನಾನು ಕೆಲಸ ಮಾಡುವದನ್ನೂ ಮತ್ತು ಹಣ ಸಂಪಾದಿಸುವದನ್ನೂ ಆಯ್ದುಕೊಳ್ಳಬಹುದು, ಆದರೆ ನಾನು ಸಂಪಾದಿಸುವ ಹಣದ ಮೇಲೆ ಟ್ಯಾಕ್ಸುಗಳನ್ನು ಕೊಡುವ ಹಂಗಿನಲ್ಲಿರುತ್ತೇನೆ. ನನ್ನ ತಂದೆತಾಯಿಗಳ ಅಧಿಕೃತ ಅಪ್ಪಣೆಯಿಲ್ಲದೇ ನನ್ನ ಸ್ವಂತ ತೀರ್ಮಾನಗಳನ್ನು ತೆಗೆದುಕೊಳ್ಳುವ ಹಕ್ಕು ನನಗಿರುತ್ತದೆ, ಆದರೆ ನನ್ನ ಕೃತ್ಯಗಳಿಗಾಗಿ ನಾನು ಜವಬ್ದಾರನಂತೆ ಕಾನೂನಿನಿಂದ ನಾನು ತೀರ್ಪು ಹೊಂದುತ್ತೇನೆ. ಪ್ರೌಢನಂತೆ ನಾನು ಜೀವಿಸುವ ನಿಯಮಗಳು ನಾನು ಬಾಲಕನಾಗಿದ್ದಾಗ ನಾನು ಯಾವ ನಿಯಮಗಳಿಗೆ ಅಧೀನನಾಗಿದ್ದೇನೋ ಅದಕ್ಕಿಂತ ಭಿನ್ನವಾಗಿದ್ದವು.

ಮೊದಲನೆಯ ಶತಮಾನದ ಯೆಹೂದ್ಯರು ಅಂಥದೇ ಪರಿಸ್ಥಿತಿಯಲ್ಲಿ ತಮ್ಮನ್ನು

ಕಂಡುಕೊಂಡರು. ಅವರು ಎರಡು ರೀತಿಯ ಆತ್ಮಿಕ ನಿಯಮಗಳ ಇಲ್ಲವೇ ಒಡಂಬಡಿಕೆಗಳ ಅಧೀನತೆಯಲ್ಲಿ ಜೀವಿಸುವದನ್ನು ಅನುಭವಿಸಿದರು. ದೇವಾಲಯದಲ್ಲಿ ಯಜ್ಞಗಳನ್ನರ್ಪಿಸುತ್ತ, ವಾರ್ಷಿಕ ಹಬ್ಬಗಳನ್ನು ಆಚರಿಸುತ್ತ. ವಿಶೇಷವಾಗಿ ನೇಮಿಸಲ್ಪಟ್ಟ ಯಾಜಕರ ಮುಖಾಂತರ ದೇವರ ಬಳಿಗೆ ಹೋಗುತ್ತಾ ಮತ್ತು ಮೋಶೆಯ ಮುಖಾಂತರ ಇಸ್ರಾಯೇಲಿಗೆ ಕೊಡಲ್ಪಟ್ಟ ಇತರ ಎಲ್ಲಾ ನಿಯಮಗಳನ್ನು ಕೈಕೊಳ್ಳುತ್ತ ಅವರು ಮೋಶೆಯ ಧರ್ಮಶಾಸ್ತ್ರದ ಅಧೀನತೆಯಲ್ಲಿ ಜೀವಿಸುತ್ತಿದ್ದರು. ಕ್ರಿಸ್ತನ ಪುನರುತ್ಥಾನದ ನಂತರದ ಮೊದಲನೆಯ ಪಂಚಾಶತ್ತಮ ದಿನದಂದು ಯೆರೂಸಲೇಮಿನಲ್ಲಿ ಕ್ರೈಸ್ತತ್ವವು ಪ್ರಾರಂಭಿಸಲ್ಪಟ್ಟಿತು. ಕೆಲವು ಜನ ಯೆಹೂದ್ಯರು ಕ್ರಿಸ್ತನನ್ನು ಆತನ ಸಭೆಯಂತೆ ಅನುಸರಿಸಲು ತೀರ್ಮಾನಿಸಿದಾಗ, ಅವರು ಮೋಶೆಯ ಧರ್ಮಶಾಸ್ತ್ರವನ್ನು ಬಿಟ್ಟು ಬಿಟ್ಟು, ಹೊಸ ನಿಯಮಗಳ ಅಧೀನತೆಯಲ್ಲಿ ಬಂದು ದೇವರ ಹೊಸ ಒಡಂಬಡಿಕೆಯಲ್ಲಿ ಪ್ರವೇಶಿಸಿದರು. ಹೊಸ ಒಡಂಬಡಿಕೆಯ ಅಧೀನತೆಯಲ್ಲಿರುವ ಕ್ರೈಸ್ತರಂತೆ, ಅವರು ನಂಬಿಕೆಯಿಂದ ನಡೆಯುವರು, ಆತನ ಅಪೊಸ್ತಲರ ಮುಖಾಂತರ ಪ್ರಕಟಿಸಲ್ಪಟ್ಟಂತೆ ಕ್ರಿಸ್ತನ ಚಿತ್ತಕ್ಕನುಸಾರವಾಗಿ ಜೀವಿಸುವರು, ಮತ್ತು ಕ್ರಿಸ್ತನ ಆತ್ಮಿಕ ದೇಹದಂತೆ ದೇವರ ಸೇವೆ ಮಾಡುವರು ಮತ್ತು ಆರಾಧಿಸುವರು.

ಮೋಶೆಯ ಧರ್ಮಶಾಸ್ತ್ರದಿಂದ ಕ್ರೈಸ್ತತ್ವಕ್ಕೆ ಯೆಹೂದ್ಯರು ಈ ಬದಲಾವಣೆಯನ್ನು ಮಾಡಿದಂತೆ, ಒಂದು ಸತ್ಯವು ಧೈರ್ಯದ ಉಪಶಮನವಾಗಿ ಅವರಿಗೆ ನಿಂತು ಕೊಂಡಿತು, ಅದು ಯಾಜಕರಂತೆ ತನಗೆ ಸೇವೆ ಮಾಡಲು ತನ್ನ ಜನರಲ್ಲಿ ಒಂದು ಗುಂಪನ್ನು ದೇವರು ಆಯ್ಕೆ ಮಾಡಿಕೊಳ್ಳುವದಿಲ್ಲ, ಆದರೆ ಆತನ ಎಲ್ಲಾ ಜನರು ಆತನ ಯಾಜಕರಾಗಿರುವರು ಎಂಬುದು. ಹೊಸ ಒಡಂಬಡಿಕೆಯ ಪ್ರಕಾರವಾಗಿ, ಕ್ರಿಸ್ತನು ತನ್ನ ರಕ್ತದಲ್ಲಿ ತೊಳೆಯಲ್ಪಟ್ಟ ಎಲ್ಲರನ್ನೂ ಸ್ವೀಕರಿಸಿದ್ದಾನೆ ಮತ್ತು ಅವರನ್ನು "ರಾಜ್ಯವನ್ನಾಗಿಯೂ ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ ಮಾಡಿದ್ದಾನೆ" (ಪ್ರಕಟನೆ 1:6). ಕ್ರಿಸ್ತನಲ್ಲಿ ನಾವು, "ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ" ಆಗಿದ್ದೇವೆ (1 ಪೇತ್ರ 2:9). ನಾವು ಕ್ರಿಸ್ತನ ಸಭೆಗೆ ಕೂಡಿಸಲ್ಪಡುತ್ತಾ ಇದ್ದೇವೆ, ಅದು "ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ, ಮತ್ತು ಯೇಸು ಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾದ ಆತ್ಮೀಯ ಯಜ್ಞಗಳನ್ನು ಸಮರ್ಪಿಸುವದಕ್ಕೆ ಪರಿಶುದ್ಧ ಯಾಜಕ ವರ್ಗದವರಾಗಿದ್ದೀರಿ" (1 ಪೇತ್ರ 2:5). ಎಲ್ಲಾ ಕ್ರೈಸ್ತರ ಈ ಯಾಜಕತ್ವವು, ನಮ್ಮನ್ನು ವಿಸ್ಮಯದಲ್ಲಿ, ಭಕ್ತಿಯಲ್ಲಿ ಮತ್ತು ಕೃತಜ್ಞತೆಯ ಆಳವಾದ ಭಾವನೆಯಲ್ಲಿ ಪ್ರೇರೇಪಿಸುತ್ತ, ಅದು ಯೆಹೂದ್ಯರನ್ನು ತಟ್ಟಿದಂತೆ ನಮ್ಮನ್ನು ತಟ್ಟತಕ್ಕದ್ದು.

ಸಭೆಯ ಯಾಜಕತ್ವದ ಲಕ್ಷಣವನ್ನು ಅರ್ಥ ಮಾಡಿಕೊಳ್ಳುವಾಗ, ಅದು ಪ್ರತಿಯೊಬ್ಬ ಕ್ರೈಸ್ತನನ್ನು ಪ್ರೋತ್ಸಾಹಿಸುವುದು. ಹಿಂದಿನ ಯುಗದಲ್ಲಿ ದೇವರು ಲೇವಿಯರನ್ನು ತನ್ನ ಯಾಜಕರನ್ನಾಗಿ ಮಾಡುವದರಿಂದ ಗೌರವಿಸಿದನು; ಮತ್ತು ಇಂದಿನ ಯುಗದಲ್ಲಿ, ದೇವರು ಕ್ರಿಸ್ತನಲ್ಲಿ ಬಂದ ಪ್ರತಿಯೊಬ್ಬರನ್ನು ತನ್ನ ರಾಜ್ಯದಲ್ಲಿ ಅವನನ್ನು ಇಲ್ಲವೇ ಆಕೆಯನ್ನು ಯಾಜಕರನ್ನಾಗಿ ಮಾಡುವದರಿಂದ ಗೌರವಿಸಿದ್ದಾನೆ.

ದೇವರ ಮಕ್ಕಳ ಎಲ್ಲರ ಯಾಜಕತ್ವದ ಬಗ್ಗೆ ಈ ಸತ್ಯವು ನಮ್ಮನ್ನು ಹಿಡಿದು ಕೊಂಡಿರುವುದೋ? ನಾವು ಅದರ ಮಹತ್ವವನ್ನು ನೋಡಿರುವೆವೋ? ಅದರ ಬಗ್ಗೆ ನಾವು ಇನ್ನೂ ಆಳವಾಗಿ ವಿಚಾರಿಸೋಣ.

## ದೇವರಿಂದ ಒಂದು ಯಾಜಕೀಯ ಹಕ್ಕು ಬಾಧ್ಯತೆ

ಕ್ರೈಸ್ತರಾದವರಿಗೆ ಅವರ ಮೇಲೆ ಯಾಜಕೀಯ ಬಾಧ್ಯಸ್ತಿಕೆಯು ಒದಗಿಸಲ್ಪಟ್ಟಿದೆ. ದೇವರು ತನ್ನ ಹಳೆಯ ಒಡಂಬಡಿಕೆಯಲ್ಲಿಯ ಯಾಜಕರಿಗೆ ಮಾಡಿದಂತೆ, ತನ್ನೊಂದಿಗೆ ಒಂದು ವಿಶೇಷವಾದ ಸಂಬಂಧದೊಂದಿಗೆ ಅವರನ್ನು ಗೌರವಿಸಿದ್ದಾನೆ.

ಮೋಶೆಯ ಕ್ರಮದ ಯಾಜಕರು ದೇವರೊಂದಿಗೆ ವಿಶಿಷ್ಠವಾದ ಅನ್ಯೋನ್ಯತೆಯ ಕೊಡುಗೆ ಹೊಂದಿದ್ದರು. ಇತರ ಇಸ್ರಾಯೇಲ್ಯರಿಂದ ಅನುಭವಿಸದೇ ಇರುವ ರೀತಿ ಯಲ್ಲಿ ಅವರು ದೇವರ ಸನ್ನಿಧಿಯಲ್ಲಿ ಅನುದಿನವೂ ಜೀವಿಸಿದರು. ಪ್ರತಿಯೊಂದುಸಲ ಶಿಬಿರ ಬಿಟ್ಟಸ್ಥಳದಲ್ಲಿ, ಅವರ ಡೇರೆಗಳು ದೇವದರ್ಶನ ಗುಡಾರದ ಎದುರಿನಲ್ಲಿ, ದೇವರ ದೃಶ್ಯ ಸಾನ್ನಿಧ್ಯದ ಬಳಿಯಲ್ಲಿ ಹಾಕಲ್ಪಡುತ್ತಿದ್ದವು. ಇಸ್ರಾಯೇಲ್ಯರು ಕಾನಾನಿನಲ್ಲಿ ನೆಲೆಸಿದಾಗ, ಯಾಜಕರು ಲೇವಿಯರೊಂದಿಗೆ, ದೇವರನ್ನು ತಮ್ಮ ವಿಶೇಷ ಸ್ವಾಸ್ತ್ಯದಂತೆ ಸ್ವೀಕರಿಸಿದರು, ಅವರಿಗೆ ಭೂಸ್ವಾಸ್ತ್ಯವಿರಲಿಲ್ಲ. ಜೀವಿಸಲು ಸ್ಥಳಗಳಂತೆ ನಾಲ್ವತ್ತೆಂಟು ಪಟ್ಟಣಗಳನ್ನೂ ಅವುಗಳ ಸುತ್ತಲಿನ ಹುಲ್ಲುಗಾವಲುಗಳನ್ನೂ ಅವರು ಸ್ವೀಕರಿಸಿದರು (ಯೆಹೋಶುವ 21:41), ಆದರೆ ಅವರಿಗೆ ಇತರ ಗೋತ್ರಗಳಿಂದ ಸಹಾಯ ದೊರೆತದ್ದರಿಂದ ಅವರು ತಮ್ಮ ಸಮಯವನ್ನು ದೇವರ ಸೇವೆಗೆ ಪೂರ್ಣವಾಗಿ ಕೊಡಲಿಕ್ಕೆ ಶಕ್ತರಾದರು. ಇಸ್ರಾಯೇಲ್ಯರಿಂದ ತರಲ್ಪಡುವ ಪ್ರತಿಯೊಂದು ಯಜ್ಞವು ದೇವರಿಗೆ ಒಬ್ಬ ಯಾಜಕನಿಂದ ದೇವರ ದರ್ಶನ ಗುಡಾರದ ಬಳಿಯಲ್ಲಿ ಅರ್ಪಿಸಲ್ಪಡುತ್ತಿತ್ತು. ದೇವರು ತನ್ನೊಂದಿಗೆ ಸಂಬಂಧದ ಮೆಚ್ಚಿಕೆಯಿದ್ದು ಯಾಜಕರನ್ನು ಪ್ರತ್ಯೇಕಿಸಿದ್ದನು.

ದೇವರೊಂದಿಗಿನ ಈ ನಿಕಟ ಅನ್ಯೋನ್ಯತೆಯು ಹಳೇ ಒಡಂಬಡಿಕೆಯ ಸಮಯಗಳಲ್ಲಿ ಯಾಜಕರಿಂದ ಮಾತ್ರವೇ ಅನುಭವಿಸಲ್ಪಟ್ಟಿದ್ದು, ಈ ಕ್ರೈಸ್ತ ಯುಗದಲ್ಲಿ ಪ್ರತಿಯೊಬ್ಬ ಕ್ರೈಸ್ತನಿಗೆ ಕೊಡಲ್ಪಡುತ್ತದೆ. ಸುವಾರ್ತೆಯ ಮುಖಾಂತರ ದೇವರ ಬಳಿಗೆ ಬರುವವನು ಆತನ ಕುಟುಂಬದಲ್ಲಿ ದತ್ತು ತೆಗೆದುಕೊಳ್ಳಲ್ಪಡುತ್ತಾನೆ ಮತ್ತು "ಆತನ ಸ್ವಂತ ಸ್ವಾಸ್ತ್ಯದ ವ್ಯಕ್ತಿಯಂತೆ" ನೋಡಲ್ಪಡುತ್ತಾನೆ (ತೀತ 2:14). "ಒಂದು ಸಲ ಪ್ರಜೆಯಾಗಿರಲಿಲ್ಲದವರು" ಈಗ "ದೇವರ ಪ್ರಜೆಯಾಗಿದ್ದಾರೆ" (1 ಪೇತ್ರ 2:10) ದೇವರಿಂದ "ದೂರದಲ್ಲಿದ್ದವರು" (ಎಫೆಸ 2:17), ಯೇಸು ಕ್ರಿಸ್ತನ ರಕ್ತದಿಂದ "ಸಮೀ ಪಕ್ಕೆ ತರಲ್ಪಟ್ಟಿದ್ದಾರೆ" (ಎಫೆಸ 2:13), ದೇವರು (ಯೋಹಾನ 14:23), ಕ್ರಿಸ್ತನು (ಎಫೆಸ 3:17; ಕೊಲೊಸ್ಸೆ 1:27), ಮತ್ತು ಪರಿಶುದ್ಧಾತ್ಮನು (1 ಕೊರಿಂಥ 6:19, 20) ನಮ್ಮೊಳಗೆ ವಾಸಿಸುತ್ತಾರೆ. ನಾವು ಅನುದಿನವೂ ತಂದೆ, ಯೇಸು ಕ್ರಿಸ್ತ (1 ಯೋಹಾನ 1:3), ಮತ್ತು ಪರಿಶುದ್ಧಾತ್ಮನ (ರೋಮಾಪುರ 8:5) ಅನ್ಯೋನ್ಯತೆಯಲ್ಲಿ ನಡೆಯುತ್ತೇವೆ.

ಎರಡು ಕಲ್ಲಿನ ಹಲಿಗೆಗಳ ಮೇಲೆ ಕೆತ್ತಿದ ದಶಾಜ್ಞೆಗಳ ಪ್ರಥಮ ಪ್ರತಿಯೊಂದಿಗೆ ಮೋಶೆಯು ಸಿನಾಯಿ ಬೆಟ್ಟದಿಂದ ಇಳಿದು ಬಂದನು ಇಸ್ರಾಯೇಲ್ಯರು ವಿಗ್ರಹಾರಧನೆಯಲ್ಲಿ ಬಂಗಾರದ ಕರುವಿನ ಮುಂದೆ ಅಡ್ಡ ಬೀಳುತ್ತಿರುವದನ್ನು ಕಂಡುಕೊಂಡನು. "ಈ ಹತ್ತು ಆಜ್ಞೆಗಳೊಂದಿಗೆ ಸಿನಾಯಿ ಬೆಟ್ಟದಿಂದ ನಾನು ಕೆಳಗಿಳಿಯುವ ಮೊದಲೇ, ನೀವು, ಜನರು ಆಗಲೇ ಅವುಗಳನ್ನು ಮುರಿದು ಬಿಟ್ಟಿರುವಿರಿ!" ಎಂದು ಹೇಳುವ ರೀತಿಯಲ್ಲಿ ಅವನು ಹಲಿಗೆಗಳನ್ನು ನೆಲಕ್ಕೆ ಎಸೆದು ಬಿಟ್ಟನು. ಅವನು ಕರುವನ್ನು ಪುಡಿಪುಡಿಯಾಗಿ ಅರೆದು, ಪುಡಿಯನ್ನು ನೀರಿನ ಮೇಲೆ ಚೆಲ್ಲಿ, ಜನರು ಅದನ್ನು ಕುಡಿಯುವಂತೆ ಮಾಡಿದನು. ಪಾಳೆ ಯದ ದ್ವಾರದ ಬಳಿಯಲ್ಲಿ ಮೋಶೆಯು ನಿಂತುಕೊಂಡು, "ಕರ್ತನ ಪಕ್ಷದಲ್ಲಿರುವವರು ಬನ್ನಿರಿ ಮತ್ತು ನನ್ನ ಪಕ್ಕದಲ್ಲಿ ನಿಂತುಕೊಳ್ಳಿರಿ!" ಎಂದು ಹೇಳಿದನು. ಕೂಡಲೇ, ಲೇವಿಯ ಗೋತ್ರವು ಶೌರ್ಯದ ನಿಷ್ಠೆ ಮತ್ತು ಒಪ್ಪಿಗೆಯಲ್ಲಿ ಮೋಶೆಯ ಪಕ್ಕದಲ್ಲಿ ಬಂದು ನಿಂತಿತು. ಮೋಶೆಯು ಪಾಳೆಯದಲ್ಲೆಲ್ಲಾ ಹೋಗಿ, ವಿಗ್ರಹಾರಧನೆಯ ಅಪರಾಧಿಗಳಾಗಿದ್ದ

ವರೆಲ್ಲರನ್ನೂ ಕೊಲ್ಲಬೇಕೆಂದು ಲೇವಿ ಗೋತ್ರದವರಿಗೆ ಆಜ್ಞಾಪಿಸಿದನು. ಅವರು ನಂಬಿಗಸ್ತಿಕೆಯಿಂದ ಅವನ ಆಜ್ಞೆಯನ್ನು ಕೈಕೊಂಡರು. ನ್ಯಾಯತೀರ್ವಿಕೆಯ ಕರ್ತನ ಉಪಕರಣಗಳು ತಾವೇ ಆದರು. ದೇವರಿಗೆ ಅವರ ನಂಬಿಗಸ್ತಿಕೆಯ ಕಾರಣದಿಂದ, ಅವರನ್ನು ತನ್ನ ಆಯ್ದುಕೊಂಡ ಯಾಜಕರಂತೆ ದೇವರು ಅವರ ಮೇಲೆ ಅವಕಾಶವನ್ನು ಆಶೀರ್ವದಿಸಿಕೊಟ್ಟು ಮೋಶೆಯ ಕಾಲದಲ್ಲಿ ಉಳಿದ ಅವಧಿಯಲ್ಲಿ ಅವರನ್ನು ಗೌರವಿಸಿದನು. ಅಮ್ರಾಮನ ಕುಟುಂಬದವರು ಆತನ ಯಾಜಕರಾಗಿದ್ದರು ಮತ್ತು ಲೇವಿಯರಲ್ಲಿ ಉಳಿದವರು ಕರ್ತನ ಸೇವೆಯಲ್ಲಿ ಅವರಿಗೆ ಸಹಾಯಕರಾಗಿದ್ದರು. ಹೀಗೆ, ಲೇವಿಯರು ದೇವರು ಯಾರಿಗಾದರೂ ಕೊಡುವದಕ್ಕಿಂತ ಅತೀ ಹೆಚ್ಚು ಉನ್ನತ ವಾದ ಗೌರವವನ್ನು - ಲೋಕದಲ್ಲಿ ಆತನು ಆಯ್ದುಕೊಂಡ ಸೇವಕರಾಗಿರುವದನ್ನು ಹೊಂದಿಕೊಂಡರು!

ಕ್ರಿಸ್ತನ ಮುಖಾಂತರ, ಯಾರಾದರೂ ಇಂದು, ದೇವರು ಹಳೇ ಒಡಂಬಡಿಕೆಯಲ್ಲಿ ಲೇವಿಯರಿಗೆ ಮಾತ್ರ ಕೊಟ್ಟ ಗೌರವವನ್ನು ಹೊಂದಿಕೊಳ್ಳಬಹುದು. ನಂಬಿಕೆಯಲ್ಲಿ ಮತ್ತು ವಿಧೇಯತೆಯಲ್ಲಿ ಆತನ ಬಳಿಗೆ ಬರುವವನು ದೇವರಿಂದ ಪ್ರತ್ಯೇಕವಾಗಿಡಲ್ಪಟ್ಟ, ಜನಾಂಗಕ್ಕೆ, ಆತನ ಪರಿಶುದ್ಧ ಯಾಜಕತ್ವಕ್ಕೆ ಕೂಡಿಸಲ್ಪಡುತ್ತಾನೆ.

ಈ ಆಶ್ಚರ್ಯಕರವಾದ ಸತ್ಯಕ್ಕೆ ನಮಗಾಗಿ ಒಂದು ಸಂದೇಶವಿರುತ್ತದೆ: ಮೊದಲನೆಯದು, ದೇವರು ತನ್ನ ವಿಮೋಚಿತ ಜನರಿಗೆ ತನ್ನ ದೃಷ್ಟಿಯಲ್ಲಿ ಮಹತ್ವವನ್ನೂ ಮೌಲ್ಯವನ್ನೂ ಕೊಟ್ಟಿದ್ದಾನೆ ಎಂದು ಅದು ನಮ್ಮ ಜ್ಞಾಪಕಕ್ಕೆ ತರಬೇಕು. ಏನೂ ಇಲ್ಲದ ಸ್ಥಿತಿಯಿಂದ ದೇವರ ವಿಶೇಷ ಸ್ವಾಸ್ತ್ಯವಾಗುವಂತೆ ನಾವು ಮೇಲಕ್ಕೆ ಎತ್ತಲ್ಪಟ್ಟಿದ್ದೇವೆ. ನಾವು ಕೇವಲ "ಒಂದು ಜನಾಂಗವಾಗಿಲ್ಲ"; ನಾವು "ದೇವರ ಜನಾಂಗವಾಗಿದ್ದೇವೆ" ಇದಲ್ಲದೇ, ಈ ಸತ್ಯವು ಈ ಜಗತ್ತಿನಲ್ಲಿ ನಮ್ಮ ನಿಯೋಗವನ್ನು ಸ್ಪಷ್ಟಪಡಿಸುತ್ತದೆ. ಒಂದು ವಿಶಿಷ್ಟವಾದ ಅರ್ಥದಲ್ಲಿ ನಾವು ದೇವರ ಸೇವಕರಾಗಿದ್ದೇವೆ. ಇದಲ್ಲದೇ, ಈ ಸತ್ಯವು ನಮ್ಮಲ್ಲಿ ಕೃತಜ್ಞತೆಯ ಸಾಯದ ಮನೋಭಾವನೆಯನ್ನು ಉತ್ಪಾದಿಸತಕ್ಕದ್ದು. ನಾವು ಇರುವಲ್ಲಿಯೇ ಇರುತ್ತೇವೆ ಮತ್ತು ನಾವು ಏನಾಗಿರುತ್ತೇವೆಯೋ ಅದಕ್ಕೆ ಕಾರಣ ದೇವರ ಕೃಪೆಯೇ.

## ದೇವರ ಕಡೆಗೆ ಯಾಜಕೀಯ ಪ್ರವೇಶ

ಕ್ರಿಸ್ತನ ಆತ್ಮಿಕ ದೇಹದ ಸದಸ್ಯರಾಗಿರುವವರಿಗೆ ದೇವರ ಕಡೆಗೆ ಯಾಜಕೀಯ ಪ್ರವೇಶವಿರುತ್ತದೆ. ಆತನನ್ನು ಸಂಧಿಸಲಿಕ್ಕೆ ಬೇರೆ ಯಾವುದೇ ಮಾನವ ಜೀವಿಯ ಮುಖಾಂತರ ನಾವು ಹೋಗಬೇಕಾಗಿರುವದಿಲ್ಲ. ಕ್ರಿಸ್ತನ ಮುಖಾಂತರ, ನಮಗೆ ದೇವರ ಕಡೆಗೆ ತೆರೆದ ಪ್ರವೇಶವಿದೆ.

ಮಾನವ ಯಾಜಕನ ಮುಖಾಂತರ ಯೆಹೂದ್ಯರು ದೇವರ ಬಳಿಗೆ ತಲುಪಬಹುದಿತ್ತು. ದೇವರು ಯೆಹೂದ್ಯರೊಂದಿಗೆ ಪ್ರವಾದಿಯ ಇಲ್ಲವೇ ಯಾಜಕನ ಮುಖಾಂತರ ಮಾತಾಡಿದನು, ಮತ್ತು ಯೆಹೂದ್ಯರು ಯಾಜಕನ ಮುಖಾಂತರ ದೇವರೊಂದಿಗೆ ಯಜ್ಞಗಳನ್ನು ಅರ್ಪಿಸಿದರು. ಯೆಹೂದ್ಯರಿಗೂ ತಮಗೂ ಮತ್ತು ದೇವರಿಗೂ "ಮಧ್ಯದಲ್ಲಿಯ" ಬಿರುಕಿಗೆ ಸೇತುವೆಯಾಗಿ ಮಾನವ ಮಧ್ಯಸ್ಥಿಕೆ ಬೇಕಾಗಿತ್ತು.

ಈಗ, ಕ್ರಿಸ್ತನಲ್ಲಿ, ಕ್ರೈಸ್ತರು ಯೇಸುವಿನ ಮುಖಾಂತರ ದೇವರ ಬಳಿಗೆ ನೇರವಾಗಿ ಹೋಗಬಹುದು. ಯೆಹೂದ್ಯನಿಗೂ ಅನ್ಯನಿಗೂ ಇಬ್ಬರಿಗಾಗಿಯೂ

ಶಿಲುಬೆಯಿಂದ ದೇವರಿಗೂ ಮನುಷ್ಯನಿಗೂ ಮಧ್ಯದಲ್ಲಿಯ ಎಲ್ಲಾ ಆತಂಕಗಳು ತೆಗೆದು ಹಾಕಲ್ಪಟ್ಟಿವೆ. ಕ್ರಿಸ್ತನಲ್ಲಿ ಯೆಹೂದ್ಯರಿಗೂ ಅನ್ಯರಿಗೂ ಇರುವ ಐಕ್ಯತೆಯ ಒಂದು ಭಾಗದ ಅಂತ್ಯದಲ್ಲಿ, ಪೌಲನು ಈ ಪ್ರವೇಶವನ್ನು ನಮೂದಿಸಿದನು: "ಆತನ ಮೂಲಕ ನಾವು ನೀವೂ ಒಬ್ಬ ಆತ್ಮನನ್ನೇ ಹೊಂದಿದವರಾಗಿ ತಂದೆಯ ಬಳಿಗೆ ಪ್ರವೇ ಶಿಸುವದಕ್ಕೆ ಮಾರ್ಗವಾಯಿತು" (ಎಫೆಸ 2:18). ಅನಂತರ, ಪೌಲನು, "ನಮಗಿರುವ ಭರವಸವುಳ್ಳ ಧೈರ್ಯವು ಕ್ರಿಸ್ತನಲ್ಲಿ ಇಟ್ಟಿರುವ ನಂಬಿಕೆಯ ಮೂಲಕ ಆತನಲ್ಲಿಯೇ ನಮಗೆ ಉಂಟಾಯಿತು" (ಎಫೆಸ 3:12) ಎಂದು ಬರೆದನು. ದೇವರ ಬಳಿಗೆ ಬರಲಿಕ್ಕೆ ಕ್ರೈಸ್ತನಿಗೆ ಅಗತ್ಯವಾಗಿರುವ ಒಬ್ಬನೇ ಒಬ್ಬ ಮಧ್ಯಸ್ಥಗಾರನು ಯೇಸುವಾಗಿದ್ದಾನೆ: "ಏಕಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ" (1 ತಿಮೊಥೆ 2:5).

ನನ್ನ ಜೀವಿತದಲ್ಲಿ ನನಗೆ ಇಬ್ಬರು ಪ್ರೆಸಿಡೆಂಟರಿರುವರು. ಅತೀ ಸಮೀಪ ದಲ್ಲಿರುವವನು ನಾನು ದಿನವೂ ಬೈಬಲ್ ಬೋಧಿಸುವ ಹಾರ್ಡಿಂಗ್ ಯುನಿವರ್ಸಿಟಿಯ ಪ್ರೆಸಿಡೆಂಟನು. ಅವನು ನನ್ನ ಮೇಲಾಧಿಕಾರಿ ನಾನು ಅವನನ್ನು ಪ್ರತಿದಿನ ಚಾಪೆಲಿನಲ್ಲಿ ನೋಡುತ್ತೇನೆ, ಮತ್ತು ಬಹಳ ಸಲ ನಾನು ಅವನೊಂದಿಗೆ ಟೀಚರ್ಸ್ ಮೀಟಿಂಗ್‌ನಲ್ಲಿಯೂ ಕಟ್ಟಡಗಳಲ್ಲಿ ಹಾದೂ ಹೋಗುವಾಗಲೂ ಮಾತನಾಡುತ್ತೇನೆ. ಸಾಮಾಜಿಕ ಕಾರ್ಯಕ್ರಮ ಗಳಲ್ಲಿ ನಾನು ಅವನನ್ನು ಸಂದರ್ಶಿಸುತ್ತೇನೆ; ಕಾಲೇಜ್ ಚರ್ಚಿನಲ್ಲಿ ನಾನು ಪ್ರಸಂಗಿಸುತ್ತಿರದೇ ಇರುವಾಗ, ನಾನು ಆರಾಧನೆಯಲ್ಲಿ ಭಾಗವಹಿಸುತ್ತಿರುವಾಗ ಅವನನ್ನು ನೋಡುತ್ತೇನೆ. ನಾನು ಬಹಳ ಸಲ ಅವನೊಂದಿಗೆ ಮಾತನಾಡುತ್ತಿರುವದರಿಂದ ಹಾಗೂ ಅನೇಕ ವರ್ಷಗಳಿಂದ ಅವನಿಗೆ ನಿಕಟವಾದ ಸಂಬಂಧದಲ್ಲಿ ಇರುವದರಿಂದ ಅವನನ್ನು ನಾನು ನನ್ನ ವೈಯಕ್ತಿಕ ಸ್ನೇಹಿತನೆಂದು ಕರೆಯುತ್ತೇನೆ. ದಿನದ ಯಾವುದೇ ತಾಸಿನಲ್ಲಿ ಅವನೊಂದಿಗೆ ದೂರವಾಣಿ ಕರೆ ಮಾಡಬಹುದು. ನಾನು ಬಯಸಿದ ಯಾವುದೇ ವಿಷಯವನ್ನು ಮಾತನಾಡಲು ಅಪ್ಪಣೆ ಹೊಂದಿದ್ದೇವೆ. ನನ್ನೊಂದಿಗೆ ಫೋನಿ ನಲ್ಲಿ ಮಾತನಾಡಲಿಕ್ಕೆ ಅವನಿಗಾಗದಿದ್ದರೆ, ತನಗೆ ಸಾಧ್ಯವಾದಷ್ಟು ಬೇಗನೇ ನನಗೆ ಕರೆ ಮಾಡುತ್ತಾನೆ.

ನನ್ನ ಜೀವನದಲ್ಲಿ ಎರಡನೆಯ ಪ್ರೆಸಿಡೆಂಟನು ಯುನೈಟೆಡ್ ಸ್ಟೇಟ್ಸ್‌ದ ಪ್ರೆಸಿಡೆಂಟನು ವೈಯಕ್ತಿಕವಾಗಿ ನಾನು ಅವನೊಂದಿಗೆ ಎಂದಿಗೂ ಮಾತಾಡಿರುವದಿಲ್ಲ. ಒಂದೇ ಸಲ ವ್ಯಕ್ತಿಯಾಗಿ ನಾನು ಅವನನ್ನು ನೋಡಿದ್ದೇನೆ. ಅದೂ ಅವನು ಪರೇಡಿನಲ್ಲಿ ಕಾರಿನಲ್ಲಿ ಹೋಗುತ್ತಿದ್ದಾಗ, ದೂರದಿಂದ ನೋಡಿದ್ದೇನೆ. ಅವನ ಬಗ್ಗೆ ನನಗೆ ನಿಜವಾಗಿ ತಿಳಿದದ್ದೆಲ್ಲವೂ ಅವನ ಬಗ್ಗೆ ನಾನು ವೃತ್ತ ಪತ್ರಿಕೆಗಳಲ್ಲಿ ಓದಿದ್ದು ಮತ್ತು ದೂರದರ್ಶನದಲ್ಲಿ ನೋಡಿದ್ದು. ಅವನನ್ನು ಒಬ್ಬ ಸ್ನೇಹಿತನಂತೆ ತಿಳಿದಿರುವೆನೆಂದು ನಾನು ಹೇಳುವದಿಲ್ಲ. ಅವನ ವೈಯಕ್ತಿಕ ಜೀವನದ ಬಗ್ಗೆ ಪ್ರಥಮವಾದ ಯಾವುದನ್ನೂ ನಾನು ತಿಳಿದಿರುವದಿಲ್ಲ ಮತ್ತು ನನ್ನ ಬಗ್ಗೆ ಅವನು ಏನನ್ನೂ ತಿಳಿದಿರುವದಿಲ್ಲ. ಒಂದು ಮಹತ್ವದ ವಿಷಯದ ಬಗ್ಗೆ ಅವನನ್ನು ಕರೆಯುವ ಅಗತ್ಯತೆಯಿದ್ದರೆ, ಅವನೊಂದಿಗೆ ಮಾತನಾಡಲು ನನಗೆ ಅಪ್ಪಣೆ ದೊರೆಯುವದಿಲ್ಲ. ಸಂದೇಶವು ಅವನಿಗೆ ತಲುಪಿಸಲ್ಪಡುವುದು ಎಂಬ ವಾಗ್ದಾನ ನನಗೆ ಕೊಡಲ್ಪಡುತ್ತದೆ. ನನ್ನ ಜಗತ್ತಿನಿಂದ ಬಹಳ ದೂರದಲ್ಲಿರುವ ಜಗತ್ತಿನಲ್ಲಿ ಅವನು ವಾಸಿಸುತ್ತಾನೆ. ನಾಲ್ಕು ವರ್ಷಗಳಿಗೊಮ್ಮೆ ನಮ್ಮ ದೇಶವು ಪ್ರೆಸಿಡೆಂಟನನ್ನು ಆಯ್ಕೆ ಮಾಡುವಾಗ ಮತಹಾಕುವ ಯಂತ್ರದ ಬಳಿಗೆ ಬರುವದನ್ನು ಬಿಟ್ಟರೆ, ಅವನ ಜೀವನ ಮತ್ತು ಅಧಿಕಾರದ ಬಳಿಗೆ ನನಗೆ ಬರಲು ನಿಜವಾದ ಮಾರ್ಗವಿರುವದಿಲ್ಲ. ಅವನು ಮಾಡುವಂಥದ್ದು ನನ್ನ ಮೇಲೆ ಪರಿಣಾಮ ಮಾಡುತ್ತದೆ, ಆದರೆ ಅವನು ನನ್ನನ್ನು ಎಂದೂ

ನೋಡುವದಿಲ್ಲ, ಮತ್ತು ನಾನು ದೂರದಿಂದ ಮಾತ್ರ ಅವನನ್ನು ನೋಡುತ್ತೇನೆ.

ಈ ಇಬ್ಬರು ಪ್ರೆಸಿಡೆಂಟರ ಮಧ್ಯದಲ್ಲಿ ಯಾವ ಭಿನ್ನತೆ ಇರುವುದು? ಇರುವ ಭಿನ್ನತೆ ಇಷ್ಟೇ; ನನಗೆ ಒಬ್ಬನ ಬಳಿಗೆ ಪ್ರವೇಶವಿದೆ ಮತ್ತು ಇನ್ನೊಬ್ಬನ ಕಡೆಗೆ ನನಗೆ ಪ್ರವೇಶ ಇರುವದಿಲ್ಲ. "ಪ್ರವೇಶ" ಎಂಬ ಆ ಒಂದು ಪದದಲ್ಲಿ ಭಿನ್ನತೆಯಿದೆ. ನಾನು ಒಬ್ಬ ಕ್ರೈಸ್ತನಾಗಿರುವದರಿಂದ, ದೇವರೊಂದಿಗಿನ ನನ್ನ ಸಂಬಂಧವು, ಹಾರ್ಡಿಂಗ್ ಯುನಿವರ್ಸಿಟಿಯ ಪ್ರೆಸಿಡೆಂಟರೊಂದಿಗೆ ಹೋಲಿಸಲ್ಪಡಬಹುದು. ಕ್ರಿಸ್ತನ ಮುಖಾಂತರ, ನನಗೆ ಉಚಿತವಾದ ಹಾಗೂ ಆತಂಕವಿಲ್ಲದ ಪ್ರವೇಶವು ದೇವರ ಕಡೆಗೆ ಇರುತ್ತದೆ. ಯಾವುದೇ ಸಮಯದಲ್ಲಿ ಪ್ರಾರ್ಥನೆಯಲ್ಲಿ ನಾನು ಆತನನ್ನು ಸಮೀಪಿಸಬಹುದು. ಆತನ ಜೊತೆಗಾರಿಕೆಯಲ್ಲಿ ಮತ್ತು ಬಲದಲ್ಲಿ ನಾನು ಅನುದಿನವೂ ನಡೆಯುತ್ತೇನೆ. ಆತನು ಸರ್ವಶಕ್ತನಾದ ದೇವರಾಗಿರುವದರಿಂದ, ನಾನು ಪ್ರಾರ್ಥಿಸುವಾಗ ನನ್ನ ಕರೆಯನ್ನು ತಡೆಹಿಡಿಯುವದಿಲ್ಲ ಇಲ್ಲವೇ ಹಿಂದಿರಿಗಿಸುವದಿಲ್ಲ. ಕ್ರಿಸ್ತನ ನಿಮಿತ್ತವಾಗಿ, ಆತನ ಸನ್ನಿಧಿಯೊಳಗೆ ಬಾಗಿಲು ಯಾವಾಗಲೂ ನನ್ನ ಪ್ರವೇಶಕ್ಕಾಗಿ ತೆರೆದಿರುತ್ತದೆ. ತನ್ನ ಸನ್ನಿಧಿಯಲ್ಲಿ ಬರುವದಕ್ಕೆ ಆತನು ಬಿಡುವದಲ್ಲದೆ, ಅದರೊಳಗೆ ಆತನು ನನ್ನನ್ನು ಸ್ವಾಗತಿಸುತ್ತಾನೆ. ಆತನು ನನ್ನ ಅನ್ಯೋನ್ಯತೆಯನ್ನು ಹುಡುಕುತ್ತಾನೆ ಮತ್ತು ನಾನು ಆತನ ಅನ್ಯೋನ್ಯತೆಯನ್ನು ಹುಡುಕುತ್ತೇನೆ. ಆತನು ನಿಜವಾಗಿಯೂ ನನ್ನ ಪರಲೋಕದ ತಂದೆಯಾಗಿರುವನು.

ಮೋಶೆಯ ಧರ್ಮಶಾಸ್ತ್ರದ ಅಧೀನತೆಯಲ್ಲಿ ಯೆಹೂದ್ಯರಿಗೆ ಕ್ರೈಸ್ತನಂತೆ ನನಗೆ ಇರುವಂತೆ ದೇವರ ಕಡೆಗೆ ಪ್ರವೇಶವಿರಲಿಲ್ಲ. ಅವರು ಲೇವಿಕುಲದ ಯಾಜಕರ ಮುಖಾಂತರ ದೇವರ ಬಳಿಗೆ ಹೋದರು. ದೇವರು ಸತತವಾಗಿ ಅವರ ಜೊತೆಗಾರನಾಗಿದ್ದನು, ಆದರೆ ಆತನ ಬಳಿಗೆ ಅವರ ಪ್ರವೇಶವು ಮಾನವ ಯಾಜಕತ್ವದ ಮುಖಾಂತರ ಮಿತಿಗೊಳಿಸಲ್ಪಟ್ಟಿತ್ತು.

ಕ್ರೈಸ್ತರು ಅನುಭವಿಸುವ ಈ ಯಾಜಕೀಯ ಪ್ರವೇಶದ ಸತ್ಯವು ನಮ್ಮನ್ನು ಪ್ರೋತ್ಸಾಹಿಸಬೇಕಷ್ಟೇ ಅಲ್ಲದೇ ನಮ್ಮನ್ನು ಬಲದಿಂದ ತುಂಬಿಸಬೇಕು. ದೇವರು ನಮ್ಮನ್ನು ತನ್ನ ಸನ್ನಿಧಿಯಲ್ಲಿ ಸ್ವಾಗತಿಸುವನು, ನಮ್ಮ ಅನ್ಯೋನ್ಯತೆಯನ್ನು ಆನಂದಿಸುವನು, ಮತ್ತು ತಂದೆಯು ತನ್ನ ಬಳಿಗೆ ತನ್ನ ಮಕ್ಕಳನ್ನು ಸೇರಿಸಿಕೊಳ್ಳು ವಂತೆ ತನ್ನ ಬಳಿಗೆ ಸಂಧಿಸಲು ನಮಗೆ ಸ್ವಾತಂತ್ರ್ಯವನ್ನು ಕೊಡುವನು. ಪ್ರಾರ್ಥನೆ, ಜೊತೆಗಾರಿಕೆ ಮತ್ತು ಆತ್ಮಿಕ ಸೇವೆಯ ಮುಖಾಂತರ ದೇವರೊಂದಿಗಿನ ಅನ್ಯೋನ್ಯತೆಯ ಈ ಅವಕಾಶವನ್ನು ನಾವು ನೇಮಿಸಿಕೊಳ್ಳೋಣ.

## ದೇವರಿಗಾಗಿ ಒಂದು ಯಾಜಕೀಯ ಕಾರ್ಯ

ಕ್ರೈಸ್ತರಿಗಾಗಿ, ನಮಗೆ ಒಂದು ಯಾಜಕೀಯ ಕಾರ್ಯವಿರುತ್ತದೆ. ನಾವು ಯಾಜಕರ ಕೆಲಸವನ್ನು ಮಾಡುತ್ತೇವೆ.

ಹಳೇ ಒಡಂಬಡಿಕೆಯ ಸಮಯಗಳಲ್ಲಿ, ಯಾಜಕರು ಎಲ್ಲಾ ಇಸ್ರಾಯೇಲ್ಯರಿಗಾಗಿ ದೇವರಿಗೆ ಯಜ್ಞಗಳನ್ನು ಅರ್ಪಿಸಿದರು. ದೇವರ ಆರಾಧನೆಯು ನಡಿಸಲ್ಪಡುತ್ತಿದ್ದಾಗ ದೇವದರ್ಶನ ಗುಡಾರದ ಅತೀ ಪರಿಶುದ್ಧ ಸ್ಥಳವನ್ನು ಯಾಜಕರು ಮಾತ್ರವೇ ಪ್ರವೇಶಿಸ ಬೇಕಾಗಿತ್ತು. ಸಾಮಾನ್ಯ ಇಸ್ರಾಯೇಲನು, ದೇವದರ್ಶನ ಗುಡಾರದ ದ್ವಾರದ ಬಳಿಯಲ್ಲಿ ನಿಂತುಕೊಂಡಿರುವಂತೆ, ಯಾಜಕರಿಂದ ದೇವದರ್ಶನ ಗುಡಾರದಲ್ಲಿ ಪ್ರತಿನಿಧೀಕ ರಿಸಲ್ಪಡುತ್ತಿದ್ದನು. ದೋಷಪರಿಹಾರವಾದ ಮಹಾದಿನದಂದು ಮಹಾ ಯಾಜಕನು

ಅತೀ ಪರಿಶುದ್ಧ ಸ್ಥಳವನ್ನು, ದೇವರ ಸನ್ನಿಧಿಯಲ್ಲಿ ಪ್ರವೇಶಿಸುವನು, ಮುಂದಿನ ದೋಷಪರಿಹಾರದ ದಿನದವರೆಗೆ ಜನಾಂಗದ ಪಾಪಗಳನ್ನು ಶುದ್ಧೀಕರಿಸುವದರ ಮುಖಾಂತರ, ದೋಷಪರಿಹಾರಕ ಯಜ್ಞದ ರಕ್ತದೊಂದಿಗೆ ಪ್ರವೇಶಿಸುವನು. ಈ ಆರಾಧನೆಯ ಜವಾಬ್ದಾರಿಕೆಗಳನ್ನು ದಾಟಿ, ಯಾಜಕರಿಗೆ ಇಸ್ರಾಯೇಲಿನಲ್ಲೆಲ್ಲಾ ದೇವರ ನಿಯಮಗಳನ್ನು ಬೋಧಿಸಲು ದೇವರಿಂದ ನಿರ್ದಿಷ್ಟವಾದ ಆಜ್ಞೆ ಇತ್ತು; ಅವರಿಗಾಗಿ ತನ್ನ ಚಿತ್ತದ ಭರವಸೆ ತನ್ನ ಜನಾಂಗಕ್ಕೆ ಇರಬೇಕೆಂಬುದು ದೇವರ ಉದ್ದೇಶವಾಗಿತ್ತು.

ಹಳೇ ಒಡಂಬಡಿಕೆಯ ಅವಧಿಯಲ್ಲಿಯ ಯಾಜಕರ ಈ ಪರಿಶುದ್ಧ ಕಾರ್ಯಗಳಿಗೆ ಸಮಾನವಾದವುಗಳು, ಈ ಕ್ರೈಸ್ತ ಯುಗದಲ್ಲಿ ಕ್ರೈಸ್ತರು ಮಾಡಬೇಕೆಂದು ಹೇಳಿರುವವುಗಳಲ್ಲಿ ಕಂಡುಬರುತ್ತವೆ. ಕ್ರೈಸ್ತ ಯುಗದಲ್ಲಿ ಯಾವುದೇ ಪ್ರಾಣಿ ಯಜ್ಞಗಳು ಅರ್ಪಿಸಲ್ಪಡುವದಿಲ್ಲ, ಆದರೆ ಹಾಡುವ, ಪ್ರಾರ್ಥಿಸುವ, ಕರ್ತನ ಭೋಜನ ಆಚರಿಸುವ, ಕೊಡುವ, ದೇವರ ವಾಕ್ಯದ ಅಧ್ಯಯನ ಮಾಡುವ ಹಾಗೂ ಕ್ರೈಸ್ತ ಸೇವೆ ಮಾಡುವ ಆತ್ಮಿಕ ಯಜ್ಞಗಳು ಪ್ರತಿಯೊಬ್ಬ ಕ್ರೈಸ್ತನಿಂದ ದೇವರಿಗೆ ಅರ್ಪಿಸಲ್ಪಡುತ್ತಿವೆ. ಹಾಡುವದರ ಬಗ್ಗೆ ಇಬ್ರಿಯರ ಲೇಖಕನು, "ಆತನ ಮೂಲಕವಾಗಿಯೇ ದೇವರಿಗೆ ಸ್ತೋತ್ರ ಯಜ್ಞವನ್ನು ಎಡೆಬಿಡದೆ ಸಮರ್ಪಿಸೋಣ. ಆತನು ಕರ್ತನೆಂದು ಬಾಯಿಂದ ಪ್ರತಿಜ್ಞೆ ಮಾಡುವದೇ ನಾವು ಅರ್ಪಿಸುವ ಯಜ್ಞವಾಗಿದೆ" (ಇಬ್ರಿಯ 13:15) ಎಂದು ಬರೆದಿದ್ದಾನೆ. ಪ್ರಕಟನೆಯಲ್ಲಿ, ಅಪೊಕಾಲಿಪ್ಟಿಕ್ ಭಾಷೆಯಲ್ಲಿ, ಭೂಲೋಕದ ದೇವ ಜನರ ಪ್ರಾರ್ಥನೆಗಳು ಬಂಗಾರದ ವೇದಿಯ ಮೇಲೆ ಇಡುವ ಧೂಪದಂತೆ ವಿವರಿಸಲ್ಪಟ್ಟಿವೆ (ಪ್ರಕಟನೆ 8:3). ಭೂಲೋಕದ ಸಭೆಯ ಪ್ರಮುಖ ಉದ್ದೇಶಗಳಲ್ಲಿ ಒಂದು, "ಯೇಸು ಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾದ ಆತ್ಮಿಯ ಯಜ್ಞಗಳನ್ನು" ಸಮರ್ಪಿಸುವುದು (1 ಪೇತ್ರ 2:5) ಆಗಿರುತ್ತದೆ. ಕ್ರಿಸ್ತನ ರಕ್ತದ ಮುಖಾಂತರ ದೇವರ ಸನ್ನಿಧಿಗೆ ಬಾಗಿಲು ಕ್ರೈಸ್ತರಿಗಾಗಿ ಯಾವಾಗಲೂ ತೆರೆದಿರುವಂತೆ ಇಬ್ರಿಯರಿಗೆ ಬರೆದ ಪತ್ರಿಕೆಯ ಬರಹಗಾರನು ಚಿತ್ರಿಸಿದ್ದಾನೆ:

> ಹೀಗಿರುವಲ್ಲಿ ಸಹೋದರರೇ, ಯೇಸು ನಮಗೋಸ್ಕರ ಪ್ರತಿಷ್ಠಿಸಿದ ಜೀವವುಳ್ಳ ಹೊಸ ದಾರಿಯಲ್ಲಿ ಆತನ ರಕ್ತದ ಮೂಲಕ ಆತನ ಶರೀರವೆಂಬ ತೆರೆಯ ಮುಖಾಂತರ ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು. ದೇವರ ಮನೆಯ ಮೇಲೆ ಅಧಿಕಾರಿಯಾಗಿರುವ ಶ್ರೇಷ್ಠನಾದ ಯಾಜಕನು ನಮಗಿದ್ದಾನೆ. ಆದಕಾರಣ ನೀನಪರಾಧಿಯೆಂದು ನಮ್ಮ ಮನಸ್ಸು ನಮಗೆ ಸಾಕ್ಷಿ ಹೇಳದಂತೆ ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ ಯಥಾರ್ಥ ಹೃದಯವುಳ್ಳವರಾಗಿಯೂ ದೇವರ ಬಳಿಗೆ ಬರೋಣ (ಇಬ್ರಿಯ 10:19-22).

ಕ್ರಿಸ್ತ ಯೇಸುವು ನಮ್ಮ ದೊಡ್ಡ, ನಿತ್ಯನಾದ ಮಹಾ ಯಾಜಕನಾಗಿದ್ದಾನೆ, ಮತ್ತು ಪ್ರತಿಯೊಬ್ಬ ಕ್ರೈಸ್ತನು ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಲ್ಲಿ ಆತನ ಮುಖಾಂತರ ದೇವರ ಬಳಿಗೆ ಬರುವ ಯಾಜಕನಾಗಿದ್ದಾನೆ, ನಮ್ಮ ರಕ್ಷಕನು "ನಮಗೋಸ್ಕರ ನಿತ್ಯ ವಿಮೋಚನೆಯನ್ನು ಸಂಪಾದಿಸಿಕೊಂಡವನಾಗಿ ಒಂದೇ ಸಾರಿ ದೇವರ ಸನ್ನಿಧಾನಕ್ಕೆ ಪ್ರವೇಶಿಸಿದನು" (ಇಬ್ರಿಯ 9:12ಬಿ). ಹಳೇ ಒಡಂಬಡಿಕೆಯ ಯುಗದ ಮಹಾ ಯಾಜಕರು ಪ್ರಾಣಿಯಜ್ಞವನ್ನು ಅರ್ಪಿಸಿದರು ಹಾಗೂ ರಕ್ತವನ್ನು ವರ್ಷಕ್ಕೆ ಒಂದು ಸಲ ಜನಾಂಗದ ಪ್ರಾಯಶ್ಚಿತ್ತಕ್ಕಾಗಿ ಅತೀ ಪರಿಶುದ್ಧವಾದ ಸ್ಥಳಕ್ಕೆ ಒಯ್ದರು,

ಆದರೆ ಕ್ರಿಸ್ತನು ಪರಲೋಕದೊಳಗೆ ತನ್ನನ್ನೇ ಅರ್ಪಿಸಿಕೊಂಡನು (ಇಬ್ರಿಯ 9:24, 25). ಈಗ, ಕ್ರಿಸ್ತನು ಮಾಡಿದ ವೈಯಕ್ತಿಕ ಯಜ್ಞದ ಮುಖಾಂತರ ಸದಾಕಾಲಕ್ಕೂ ಆತನು ನಮ್ಮ ಮಹಾಯಾಜಕನಾಗಿರುವನು. ಹೀಗೆ ದೇವರ ಮುಂದೆ ನಮಗಾಗಿ ವೈಯಕ್ತಿಕ ಯಾಜಕತ್ವವನ್ನು ಒದಗಿಸುವನು. ಈ ಕಾರಣದಿಂದ, ಆತನ ರಕ್ಷಿಸುವ ಕೃಪೆಯನ್ನು ಎಲ್ಲಾ ಜನರು ತಿಳಿದುಕೊಳ್ಳಲಿಕ್ಕಾಗುವಂತೆ ಜಗತ್ತಿನಲ್ಲೆಲ್ಲಾ ದೇವರ ವಾಕ್ಯವನ್ನು ಬೋಧಿಸುವಂತೆ ಕ್ರೈಸ್ತರು ಆಜ್ಞಾಪಿಸಲ್ಪಟ್ಟಿದ್ದಾರೆ (ಮಾರ್ಕ 16:15, 16).

ಸಾಮಾನ್ಯವಾಗಿ ಒಂದು ವಸ್ತುವಿನ ಕಾರ್ಯವು ಅದರ ಗುರುತನ್ನು ಸೂಚಿಸುತ್ತದೆ. ಅದು ಒಂದು ವಸ್ತುವಿನ ಕಾರ್ಯವು ಸಾಮಾನ್ಯವಾಗಿ ಅದರ ಗುರುತನ್ನು ಸೂಚಿಸುತ್ತದೆ. ಉದ್ದವಾದ ಹಿಡಿಕೆ, ಚೂಪಾದ ಡೊಂಕಾದ ಮೊನೆಯುಳ್ಳದ್ದು ಅಗಿಯುವುದಕ್ಕೆ ಉಪಯೋಗಿಸಲ್ಪಡುತ್ತದೆ ಅದನ್ನು ನಾವು ಗುದ್ದಲಿ ಎಂದು ಕರೆಯುತ್ತೇವೆ. ಆದರೆ ಚಿಕ್ಕ ಹಿಡಿಕೆಯುಳ್ಳ ಸಮನಾದ ಪಾರ್ಶ್ವಗಳಿರುವ ಕಬ್ಬಿಣದ ವಸ್ತುವು ಮೊಳೆಗಳನ್ನು ಬಡಿಯಲು ಉಪಯೋಗಿಸಲ್ಪಡುವಂಥದ್ದನ್ನು ಸುತ್ತಿಗೆ ಎಂದು ಕರೆಯಲ್ಪಡುತ್ತದೆ. ಕ್ರೈಸ್ತರು ದೇವರ ಎದುರಿನಲ್ಲಿ ಯಾಜಕರಂತೆ ಕಾರ್ಯಮಾಡಬೇಕಾಗಿರುವದರಿಂದ, ನಾವು ಯಾಜಕರೆಂದು ಹೊಸ ಒಡಂಬಡಿಕೆಯು ಕರೆಯುವದಕ್ಕೆ ನಾವು ಆಶ್ಚರ್ಯಪಡಬಾರದು. ಹೊಸ ಒಡಂಬಡಿಕೆಯಲ್ಲಿ ಮೂರು ಸಲ, ಕ್ರೈಸ್ತರು ನಿರ್ದಿಷ್ಟವಾಗಿ ಯಾಜಕರಂತೆ ಉಲ್ಲೇಖಿಸಲ್ಪಟ್ಟಿದ್ದಾರೆ (ಪ್ರಕಟನೆ 1:6; 5:10; 20:6); ಮತ್ತು ಇತರ ಹಲವಾರು ಸಮಯಗಳಲ್ಲಿ ಅವರ ಯಾಜಕತ್ವವು ಅವರ ಕಾರ್ಯದಿಂದ ಅನ್ವಯಿಸಲ್ಪಟ್ಟಿದೆ (1 ಪೇತ್ರ 2:5, 9; ಇಬ್ರಿಯ 13:15).

ದೇವರ ಯಾಜಕರಂತೆ ಈ ಜಗತ್ತಿನಲ್ಲಿ ಕಾರ್ಯ ಮಾಡಲು ಕರ್ತನಿಂದ ನಾವು ಆಮಂತ್ರಿಸಲ್ಪಟ್ಟ ಸತ್ಯವು ನಮ್ಮ ಕೆಲಸದ ಮತ್ತು ಸೇವೆಯ ಮಹತ್ವದ ಸ್ಪಷ್ಟವಾದ ದರ್ಶನವನ್ನು ಕೊಡಬೇಕು. ಯಾವುದೇ ಹಳೇ ಒಡಂಬಡಿಕೆಯ ಯಾಜಕನಿಗೆ ಅವನ ಎಲ್ಲಾ ಚಟುವಟಿಕೆಗೆ ಅರ್ಥಪೂರ್ಣವಾದ ವಾತಾವರಣದ ಭಾವನೆಯಿರಬೇಕು - ಯಾಕಂದರೆ ಅವರು ದೇವರ ವಿಶೇಷವಾದ ಸೇವಕನಾಗಿದ್ದನು, ಅವನು ಆತನ ಜನಾಂಗವನ್ನು ದೇವರ ಮುಂದೆ ಆರಾಧನೆಯಲ್ಲಿ ಮತ್ತು ಸೇವೆಯಲ್ಲಿ ನಡಿಸುತ್ತಿದ್ದನು. ಹಾಗೆಯೇ, ಇಂದು ದೇವರ ಪರಿಶುದ್ಧ ಯಾಜಕತ್ವದಂಥೆ ಆತನ ಭೂಲೋಕದ ಮೇಲೆ ಹೋಲಿಸಲಾಗದ ಈ ಕೆಲಸವನ್ನು ನಮಗೆ ಕೊಟ್ಟದ್ದಕ್ಕಾಗಿ ಕೃತಜ್ಞತೆಯಲ್ಲಿ ನಾವು ಆರಾಧಿಸಬೇಕು, ಸೇವೆ ಮಾಡಬೇಕು ಮತ್ತು ಬೋಧಿಸಬೇಕು.

ದೇವರ ಯಾಜಕರಂತೆ ನಾವು ಕಾರ್ಯಮಾಡುವದರಿಂದ, ಜವಾಬ್ದಾರಿಕೆಯ ಮಹಾ ಭಾವನೆಯುಳ್ಳವರಾಗಿರಬೇಕು. ಟ್ರಕ್ಕಿಂಗ್ ಫರ್ಮಿನ ಮುಖ್ಯಸ್ಥನು ಹೊರಗೆ ಹೋಗುವ ಗೇಟಿನ ಮೇಲೆ, ಟ್ರಕ್ಕಿನ ಡ್ರೈವರರು ತಮ್ಮ ಲೋಡುಗಳನ್ನು ಬೇರೆ ಬೇರೆ ಸ್ಥಳಗಳಿಗೆ ಒಯ್ಯುವಾಗ ಓದಲಿಕ್ಕೆ ಒಂದು ಸಂಕೇತವನ್ನು ಇಟ್ಟನು, "ಈ ಗೇಟನ್ನು ದಾಟಿ, ನೀವು ಕಂಪನಿಯನ್ನು ಪ್ರತಿನಿಧೀಕರಿಸುವಿರಿ" ಎಂದು ಅಲ್ಲಿ ಬರೆಯಲ್ಪಟ್ಟಿತ್ತು. ಜನರು ಆ ಟ್ರಕ್ ಡ್ರೈವರನ್ನು ನೋಡಿದಾಗ, ಅವರು ಕಂಪನಿಯನ್ನು ನೋಡಿದರು, ನಾವು ದೇವರ ಯಾಜಕರಾಗಿರುವದರಿಂದ, ಈ ಜಗತ್ತಿನಲ್ಲಿ ನಾವು ದೇವರನ್ನು ಪ್ರತಿನಿಧೀಕರಿಸುತ್ತೇವೆ. ಜೊತೆ ಯಾಜಕನೇ, ನಮ್ಮ ಜವಾಬ್ದಾರಿಕೆಯನ್ನು ನಾವು ಗಂಭೀರವಾಗಿ ತೆಗೆದುಕೊಳ್ಳುವೆವೋ?

# ಮುಕ್ತಾಯ

ಹಾಗಾದರೆ, ಕ್ರೈಸ್ತರು, ಕ್ರೈಸ್ತ ಯುಗದಲ್ಲಿ ದೇವರ ಪರಿಶುದ್ಧ ಯಾಜಕತ್ವದಲ್ಲಿರುವರು. ನಮಗೆ ದೇವರ ಕಡೆಗೆ ಯಾಜಕೀಯ ಪ್ರವೇಶವಿರುವುದು, ನಮಗೆ ಯಾಜಕೀಯ ಅವಕಾಶಗಳು ಕೊಡಲ್ಪಟ್ಟಿವೆ, ಮತ್ತು ಈ ಜಗತ್ತಿನಲ್ಲಿ ಯಾಜಕೀಯ ಕಾರ್ಯವನ್ನು ನಾವು ಪೂರೈಸುತ್ತೇವೆ. ನಮಗೆ ಅತ್ಯುನ್ನತ ಗೌರವವಿರುತ್ತದೆ, ಯಾಕಂದರೆ ಯೆಹೋವನ ಸ್ವಂತ ಜನಾಂಗವಾಗಿ ಪ್ರತ್ಯೇಕಿಸಲ್ಪಟ್ಟಿದ್ದೇವೆ. ನಮಗೆ ಅತ್ಯುನ್ನತವಾದ ಕರೆಯಿರುತ್ತದೆ, ಯಾಕಂದರೆ ಪರಿಶುದ್ಧರಾಗಿರಲು, ದೇವರಂತಿರಲು ನಾವು ಕರೆಯಲ್ಪಟ್ಟಿದ್ದೇವೆ. ನಮಗೆ ಅತ್ಯುನ್ನತ ಕೆಲಸವಿರುತ್ತದೆ, ಯಾಕಂದರೆ ನಮಗೆ ದೇವರ ಯಾಜಕರ ಕಾರ್ಯವು ಕೊಡಲ್ಪಟ್ಟಿರುತ್ತದೆ.

ನೀನು ಒಬ್ಬ ಕ್ರೈಸ್ತನಾಗಿರುವಿಯೋ? ಕ್ರಿಸ್ತನು ನಿನ್ನ ಪಾಪಗಳನ್ನು ಶುದ್ಧೀಕರಿಸಲು ನೀನು ಬಿಟ್ಟಿರುವಿಯೋ ಮತ್ತು ನಿನ್ನನ್ನು ದೇವರ ಯಾಜಕರಲ್ಲಿ ಒಬ್ಬನನ್ನಾಗಿ ಮಾಡಲು ಬಿಟ್ಟಿರುವಿಯೋ? ನಾವು ಕ್ರೈಸ್ತರಾಗಿರಲು ಬಯಸುತ್ತೇವೆ, ಒಬ್ಬ ಕ್ರೈಸ್ತನು ಏನನ್ನು ಹೊಂದಿಕೊಳ್ಳುತ್ತಾನೆ ಎಂಬ ಕಾರಣದಿಂದಲ್ಲ, ಆದರೆ ಕ್ರೈಸ್ತನು ಏನಾಗಿದ್ದಾನೆ ಮತ್ತು ಏನು ಮಾಡುತ್ತಾನೆ ಎಂಬ ಕಾರಣದಿಂದ.

ನಮ್ಮ ಸಂಗೀತಗಳು ನಮ್ಮ ಆಸಕ್ತಿಗಳನ್ನು, ನಿಷ್ಠೆಗಳನ್ನು ಮತ್ತು ಮೌಲ್ಯಗಳನ್ನು ಪ್ರತಿಧ್ವನಿಸುತ್ತವೆ. ಇದು ಪರಲೋಕದಲ್ಲಿಯೂ ಸಹ ಸತ್ಯವಾಗಿದೆ. ಪರಲೋಕದಲ್ಲಿ ಯಾವ ಸಂಗೀತಗಳು ಹಾಡಲ್ಪಡುತ್ತವೆ? ಸಿಂಹಾಸನದ ಮೇಲೆ ಆಸೀನದಾತನ ಹಸ್ತದಿಂದ ಏಳು ಮುದ್ರೆಗಳೊಂದಿಗಿನ ಪುಸ್ತಕವನ್ನು ಕುರಿಮರಿಯಾದಾತನು ತೆಗೆದು ಕೊಂಡಾಗ ಪರಲೋಕದಲ್ಲಿ ಹಾಡಿದ ಸಂಗೀತವನ್ನು ಗಮನಿಸಿರಿ:

> "ನೀನು ಸುರುಳಿಯನ್ನು ತೆಗೆದುಕೊಂಡು ಅದರ ಮುದ್ರೆಗಳನ್ನು ಒಡೆಯುವದಕ್ಕೆ ಯೋಗ್ಯನೇ; ನೀನು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ; ಅವರನ್ನು ನಮ್ಮ ದೇವರಿಗೋಸ್ಕರ ರಾಜ್ಯವನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದಿ; ಅವರು ಭೂಮಿಯ ಮೇಲೆ ಆಳುವರು" (ಪ್ರಕಟನೆ 5:9, 10).

ನಿನ್ನ ದೇಶದ ಪ್ರೆಸಿಡೆಂಟರಿಂದ ಅವರ ಕ್ಯಾಬಿನೆಟ್‌ದ ಭಾಗದಂತೆ ಸೇವೆ ಮಾಡಲಿಕ್ಕೆ ನೀವು ಕೇಳಲ್ಪಟ್ಟರೆ, ನೀನು ಸ್ವೀಕರಿಸುವಿಯೋ? ಹೆಚ್ಚಿನ ಮಟ್ಟಿಗೆ ಸ್ವೀಕರಿಸಬಹುದು. ನಿನ್ನ ಪಟ್ಟಣದ ಮೇಯರನಿಂದ ನಿನ್ನ ಪಟ್ಟಣದ ವಿಶೇಷ ಸೇವಕನಂತೆ ಸೇವೆ ಮಾಡಲು ನೀನು ಕೇಳಲ್ಪಟ್ಟರೆ, ನೀನು ಸ್ವೀಕರಿಸುವಿಯೋ? ನೀನು ನಿಶ್ಚಯವಾಗಿ ಮಾಡುತ್ತೀ. ದೇವರು, ವಿಶ್ವದ ಸೃಷ್ಟಿಕರ್ತನು, ತನ್ನ ಕುಮಾರನ ಮುಖಾಂತರ ನಿನಗೆ ವಿಮೋಚನೆಯನ್ನು ಅರ್ಪಿಸಿದಾತನು, ನೀನು ಆತನ ಬಳಿಗೆ ಬರಬೇಕೆಂದು ಮತ್ತು ಜಗತ್ತಿಗೆ ತನ್ನ ಪರಿಶುದ್ಧ ಯಾಜಕತ್ವದಿಂದ ಸೇವೆ ಮಾಡಲು ಕೇಳುತ್ತಿರುವನು. ನೀನು ಸ್ವೀಕರಿಸುವಿಯೋ?

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ನಿಮ್ಮ ದೇಶದಲ್ಲಿಯ ಅಲ್ಪ ವಯಸ್ಕರಿಗಾಗಿ ಕಾನೂನುಗಳನ್ನು ಮತ್ತು ವಯಸ್ಕರಿಗಾಗಿ ಇರುವ ಕಾನೂನುಗಳನ್ನು ಹೋಲಿಸಿರಿ.
2. ಪ್ರಥಮ ಶತಮಾನದ ಯೆಹೂದ್ಯರು ತಾವು ಯಾವುದರ ಅಧೀನತೆಯಲ್ಲಿರುವರು, ಮೋಶೆಯ ನಿಯಮಗಳ ಅಧೀನತೆಯಲ್ಲಿ ಇರುವರೋ, ಇಲ್ಲವೇ ಕ್ರಿಸ್ತನ ನಿಯಮಗಳ ಅಧೀನತೆಯಲ್ಲಿರುವರೋ ಎಂಬುದರ ಬಗ್ಗೆ ಹೇಗೆ ಗಲಿಬಿಲಿಗೊಂಡಿದ್ದರೆಂಬುದನ್ನು ಚರ್ಚಿಸಿರಿ.
3. ಕ್ರೈಸ್ತನಾದ ಯೆಹೂದ್ಯನ ಮನಸ್ಸಿನಲ್ಲಿ ನಿಜವಾಗಿಯೂ ಯಾವುದು ಭಿನ್ನವಾಗಿ ನಿಂತಿತು ಎಂಬುದನ್ನು ನೀವು ಹೇಗೆ ಯೋಚಿಸುವಿರಿ?
4. ದೇವರು ಮತ್ತು ಹಳೇ ಒಡಂಬಡಿಕೆಯ ಯಾಜಕನ ಮಧ್ಯದಲ್ಲಿ ಯಾವ ವಿಶೇಷವಾದ ಸಂಬಂಧವು ಅಸ್ತಿತ್ವದಲ್ಲಿತ್ತು?
5. ದೇವರ ಯಾಜಕರಾಗಿರುವುದು ಇಂದು ನಮಗೆ ಯಾವ ಯೋಗ್ಯತೆಯನ್ನು ಮತ್ತು ಮಹತ್ವವನ್ನು ಕೊಡುತ್ತದೆ?
6. "ದೇವರಿಗೆ ಸಂಪರ್ಕ" ಎಂಬ ಪದದ ಅರ್ಥವೇನು?
7. ದೇವರಿಗೆ ಸಂಪರ್ಕವಿರುವದರ ಪರಿಣಾಮವಾಗಿ ನಾವು ಅನುಭವಿಸುವ ನಿರ್ದಿಷ್ಟವಾದ ಆಶೀರ್ವಾದಗಳನ್ನು ಯಾದಿ ಮಾಡಿರಿ.
8. ಇಂದು ನಾವು ದೇವರ ಯಾಜಕರಂತೆ ಹೇಗೆ ಕಾರ್ಯ ಮಾಡುತ್ತೇವೆ?
9. ಕ್ರೈಸ್ತರನ್ನು ದೇವರ ಯಾಜಕರಂತೆ ಉಲ್ಲೇಖಿಸುವ ಪರಿಶುದ್ಧ ಬರಹಗಳನ್ನು ಯಾದಿ ಮಾಡಿರಿ.
10. ಪ್ರಕಟನೆ 5:9, 10 ವಿಶ್ವಾಸಿಗಳ ಯಾಜಕತ್ವವನ್ನು ಹೇಗೆ ಪ್ರತಿಬಿಂಬಿಸುತ್ತದೆ?
11. ಇಂದು ಒಬ್ಬನು ದೇವರ ಯಾಜಕನು ಹೇಗೆ ಆಗುತ್ತಾನೆ?
12. ಇಂದು ಯಾರಾದರೂ ದೇವರ ಯಾಜಕನೂ ಅಗಬಹುದೋ?

© 2009 Truth for Today